

ಚಿತ್ರ: ಉದಯ

# ಆಡುವ ಬಾಲೆಯ ಕಾಡುವ ಸೋಂಕು

ಬಾಲ್ಯ ಹಾಗೂ ಕಿಶೋರಾವಸ್ಥೆಯಲ್ಲಿರುವ ಹೆಣ್ಣು ಮಕ್ಕಳಲ್ಲಿ ಜನನಾಂಗಗಳ ಸೋಂಕು ಹೆಚ್ಚು. ಪುಟ್ಟ ಹೆಣ್ಣು ಮಕ್ಕಳಿಗೆ ಜನನಾಂಗದ ಸೋಂಕಿನ ಬಗ್ಗೆ ಅರಿವಿಲ್ಲದೇ ಇರುವುದರಿಂದ ತಾಯಂದಿರು ಮಕ್ಕಳ ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಕೊಡಬೇಕು.

■ ಡಾ.ವೀಣಾ ಭಟ್, ಭದ್ರಾವತಿ

ಒಂಬತ್ತು ವರ್ಷದ ಪೂರ್ವಿಯನ್ನು ಅವರಮ್ಮ ಕ್ಲಿನಿಕ್‌ಗೆ ಕರೆ ತಂದು ಬಹಳ ಸಂಕೋಚದಿಂದಲೇ 'ಏನಿದು ಮೇಡಂ, ಇಷ್ಟು ಚಿಕ್ಕ ವಯಸ್ಸಿನಲ್ಲೂ ಹೀಗೂ ಆಗುತ್ತಾ? ಇವಳಿಗೆ ಒಂದು ತಿಂಗಳಿಂದ ಬಿಳಿ ಮುಟ್ಟು ಹೋಗ್ತಾ ಇದೆ. ಒಳ ಉಡುಪು ತೊಳೆಯುವಾಗ ವಾಸನೆ ಎನಿಸುತ್ತದೆ. ನಾನಂತೂ ಇವಳ ಬಟ್ಟೇನೆಲ್ಲ ಡೆಟಾಲ್‌ನಲ್ಲಿ ನೆನೆಸಿಟ್ಟು ಬೇರೆನೇ ತೊಳೀತೀನಿ ಮೇಡಂ' ಎಂದು ಅಲವತ್ತುಕೊಂಡಳು.

ಎಂಟು ವರ್ಷದ ಹಳ್ಳಿಯ ಬಾಲೆಯ ತಾಯಿ 'ಮೇಡಂ ನಮ್ಮ ಮಗಳಿಗೆ ಆ ಜಾಗವೆಲ್ಲ ಊದಿದೆ, ಬಿಳಿಮುಟ್ಟು ಹೋಗ್ತಾ ಇದೆ. ಎಲ್ಲೆಲ್ಲೋ ತೋರಿಸಿ ಏನೇನೋ ಮುಲಾಮು, ಮಾತ್ರೆ ಎಲ್ಲಾ ಆದ್ರೂ ಕಡಿಮೆನೇ ಆಗ್ತಿಲ್ಲ; ಏನಾದ್ರು ಮಾಡಿ' ಎಂದಾಗ ನಿಧಾನವಾಗಿ ಅವಳನ್ನು ಒಳ ಕರೆದು ಪರೀಕ್ಷಿಸಿದೆ. ಅವಳ ಹೊರ ಜನನಾಂಗ ಭಾಗವೆಲ್ಲಾ ಊದಿತ್ತು. ಸಣ್ಣ ಚಾಕ್‌ಪೀಸ್ ಅನ್ನು ಯೋನಿ ಮಾರ್ಗದಲ್ಲಿ ತುರುಕಿದ್ದು ಕಂಡು ಬಂದು ಅದನ್ನು ಹೊರ ತೆಗೆದು ಚಿಕಿತ್ಸೆ ಕೊಡಬೇಕಾಯಿತು.

ಇಂತಹ ಸಮಸ್ಯೆ ಹಲವು ಬಾಲಕಿಯರದ್ದಾಗಿರಬಹುದು. ಇನ್ನೂ ಪ್ರೌಢಾವಸ್ಥೆಯನ್ನೂ ದಾಟದ ಕಿಶೋರಿಯರು ಇಂತಹ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಅವರ ತಾಯಂದಿರಲ್ಲಿ ಕೆಲವರು ಅಳುಕಿನಿಂದ, ಸಂಕೋಚದಿಂದ ಕೊರಗುತ್ತಿದ್ದರೆ, ಇನ್ನು ಕೆಲವರಷ್ಟೇ ಚಿಕಿತ್ಸೆಗಾಗಿ ಬರುತ್ತಾರೆ.

ಹೌದು, ಹೆಚ್ಚಿನ ಕಿಶೋರಿಯರಿಗಷ್ಟೇ ಅಲ್ಲ ಅವರ ತಾಯಂದಿರಿಗೂ ಹೆಣ್ಣಿನ ಜನನಾಂಗದ ಹೊರ ಭಾಗ ಹಾಗೂ ಒಳಭಾಗದ ಚಿತ್ರಣದ ಕಲ್ಪನೆಯೇ ಇರುವುದಿಲ್ಲ. ಕಾರಣ ಅರಿವು ಹಾಗೂ ಮಾಹಿತಿಯ ಕೊರತೆ. ಜೊತೆಗೆ ಈ ವಿಷಯದ ಬಗೆಗಿರುವ ಸಂಕೋಚ ಹಾಗೂ ಮಡಿವಂತಿಕೆ. ಹೆಣ್ಣು ಮಕ್ಕಳ ಸಮಸ್ಯೆಯೆಂದರೆ ಹೆಚ್ಚಿನ ಜನರು ಮುಚ್ಚಿಟ್ಟು, ಬಚ್ಚಿಟ್ಟು ಒಳಗೊಳಗೇ ಒದ್ದಾಡುವವರೇ ಹೆಚ್ಚು. ಅದರಲ್ಲೂ ಗ್ರಾಮೀಣ ಭಾಗದಲ್ಲಿ ಇದು ಬಹಳ ಹೆಚ್ಚು.

ಕಿಶೋರಾವಸ್ಥೆಯಲ್ಲಿ ಹೆಣ್ಣು ಮಕ್ಕಳ ಜನನಾಂಗಗಳ ಹೊರಭಾಗದ ಸೋಂಕು ಮಾತ್ರ ಹೆಚ್ಚು. ಆದರೆ ಸಂತಾನೋತ್ಪತ್ತಿ ವಯಸ್ಸಿನ ಮಹಿಳೆಯರಲ್ಲಿ ಒಳ ಹಾಗೂ ಹೊರ ಜನನಾಂಗಗಳ ಸೋಂಕು ಹೆಚ್ಚು.

ಒಳ ಹಾಗೂ ಹೊರ ಜನನಾಂಗಗಳ ವ್ಯವಸ್ಥೆ ಏನು ಎಂಬುದನ್ನು ಪ್ರತಿ ಹೆಣ್ಣು ತಿಳಿದಿರಬೇಕು. ಮಗುವಿನ ಜನನಕ್ಕೆ ಸಂಬಂಧಪಟ್ಟ ಅಂಗಗಳನ್ನು ಸ್ತ್ರೀ ಜನನಾಂಗಗಳು ಎಂದು ಕರೆಯುತ್ತಾರೆ. ಇದರಲ್ಲಿ ನಮ್ಮ ಕಣ್ಣಿಗೆ ಕಾಣುವಂಥವು ಹೊರ ಜನನಾಂಗಗಳು. ಇವುಗಳಲ್ಲಿ ಮೇಲೆ ಕಾಣುವ ಯೋನಿ ಕೂದಲು (ಪ್ಯುಬಿಕ್ ಹೇರ್) ಜನನಾಂಗಗಳನ್ನು ರಕ್ಷಿಸುತ್ತದೆ. ಹೊರದುಟಿ, ಒಳದುಟಿ (ಅಥವಾ ಹಿರಿಯ ಹಾಗೂ ಕಿರಿ ಭಗೋಷ್ಟಗಳು), ಭಗನ, ಮೂತ್ರದ್ವಾರ, ಯೋನಿದ್ವಾರ, ಗುದದ್ವಾರ. ಒಳ ಜನನಾಂಗಗಳೆಂದರೆ ಯೋನಿ ಮಾರ್ಗ, ಗರ್ಭಕೋಶ, ಗರ್ಭನಾಳ, ಅಂಡಾಶಯಗಳು.

ಇನ್ನೂ ಪ್ರೌಢಾವಸ್ಥೆಗೆ ದಾಟಿರದ ಹುಡುಗಿಯರಲ್ಲಿ ಗೊಲ್ಲಿಯ ಅಥವಾ